

# ಹೊಸ ತರಗತಿಗೆ ಹೊಸ ಯೋಜನೆ

■ ಜಿ.ವಿ. ಅರುಣ
ಕಲೆ: ಈಶ್ವರ ಬಡಿಗೇರ್

'ಅಮ್ಮಾ' ಪಿಂಕಿ ಕೂಗಿ ಕರೆದಳು. ಆ ಕೂಗು ಆಗ ತಾನೇ ಸ್ನೇಹಿತರನ್ನು ಭೇಟಿಯಾಗಿ ಹಿಂದಿರುಗಿದ್ದ ಪಿಂಕಿ ತನ್ನ ತಾಯಿಯ ಗಮನವನ್ನು ತನ್ನೆಡೆ ಸೆಳೆಯುವ ಪ್ರಯತ್ನದ ಫಲ. ಅಂಥ ಬಳುಕಿನ ಧ್ವನಿಯಲ್ಲಿ ಕರೆದರೆ ಅದರ ಅರ್ಥ ತಾಯಿಯಾದವಳಿಗೆ ಅಲ್ಲದೆ ಬೇರೆ ಯಾರಿಗೆ ಆಗುತ್ತದೆ? ಅದು ಯಾವುದೋ ಗಹನವಾದ ಬೇಡಿಕೆಯ ಮೊದಲ ಹೆಜ್ಜೆ ಎಂದು ಅನುಭವದಿಂದ ಆಕೆ ಅರಿತಿದ್ದಳು. ಇಂಥ ಬೇಡಿಕೆಗಳಿಗೆ ಮೂಲಸ್ಥಾನ ಪಿಂಕಿಯ ಸ್ನೇಹಿತರು ಒಟ್ಟಿಗೆ ಸೇರಿ ನಡೆಸುವ ಉನ್ನತಮಟ್ಟದ ಸಭೆ. ಅಲ್ಲಿ 'ಇದುವರೆಗೂ ಯಾರಿಗೂ ಹೊಳೆದಿಲ್ಲದ ವಿಚಾರಗಳು' ಎಂದು ತಮ್ಮ ಹೊಸ ಬೇಡಿಕೆಯ ಆವಿಷ್ಕಾರವನ್ನು ಮಾಡುತ್ತಿದ್ದರು. ಅನಂತರ ಅವುಗಳನ್ನು ಪ್ರತಿಯೊಬ್ಬರ ತಂದೆತಾಯಿಯರು ಇಷ್ಟಪಟ್ಟು ಒಪ್ಪುವಂತೆ ಮಾಡುವುದು ಹೇಗೆ? ಎಂದು ಮಥನ ಮಾಡುತ್ತಿದ್ದರು.

ಮಕ್ಕಳು ತಮಗೆ ಗೊತ್ತಿಲ್ಲದಂತೆ ತಮ್ಮ ತಂದೆತಾಯಿಯರ ಮಾನಸಿಕ ಲಕ್ಷಣಗಳನ್ನು ಅರಿತುಕೊಂಡು ಬಿಟ್ಟಿರುತ್ತಾರೆ. ಹಾಗಾಗಿ ಅದರ ಆಧಾರದಲ್ಲಿ ತಮಗೆ ಸೂಕ್ತವಾದ ವಿಚಾರವನ್ನೂ ಅವುಗಳನ್ನು ತಮ್ಮ ಮಾತಾಪಿತೃಗಳಿಗೆ ದಾಟಿಸುವ ರೀತಿನೀತಿಗಳನ್ನೂ ಕಂಡುಕೊಳ್ಳುತ್ತಿದ್ದರು. ಅದಕ್ಕೆ ಇತರ ಸ್ನೇಹಿತರ ಸಹಕಾರವಂತು ಇದ್ದೇಇರುತ್ತಿತ್ತು. ಅನಂತರ ಆ ಕಾಮ್ರೇಡ್‌ಗಳೆಲ್ಲ ಸೇರಿ ತಮ್ಮೆಲ್ಲರ ಹೊಸ ಯೋಜನೆಯ ಯಶಸ್ಸಿಗೆ ನಿರ್ಧರಿಸಿ, ಹೈ ಫೈವ್ ಮಾಡಿ, ಹೆಬ್ಬೆಟ್ಟನ್ನು ಮೇಲೆತ್ತಿ, ಒಬ್ಬರಿಗೊಬ್ಬರು ಶುಭವನ್ನು ಕೋರಿ ತಮ್ಮತಮ್ಮ ಮನೆಗಳ ಕಡೆಗೆ ಹೊರಡುತ್ತಿದ್ದರು. ಸೂಕ್ಷ್ಮವಾಗಿ ಗಮನಿಸಿದರೆ ಅವರು ಯೋಜನೆಯನ್ನು ರೂಪಿಸುವ ರೀತಿ ಆಶ್ಚರ್ಯಕರವಾಗಿರುತ್ತದೆ. ಊಹಿಸಲು ಸಾಧ್ಯವಿಲ್ಲದ ಹೊಸ ವಿಧಾನವನ್ನು ಅವರು ಸುಲಭವಾಗಿ ಅಳವಡಿಸಿಕೊಂಡು ಬಿಟ್ಟಿದ್ದರು. ಇಂಥ ಗಹನವಾದ ಬೇಡಿಕೆಗಳಿಗೆ ಮೊದಲೆಲ್ಲ ಮಗುವಿನ ಸ್ವಂತ ಆಲೋಚನೆಯ ಚಿಂತನೆ ಕೆಲಸ ಮಾಡುತ್ತಿತ್ತು. ಈಗ ಅದು ಆಪ್ತಸ್ನೇಹಿತರ 'ತಂಡದ ಚಟುವಟಿಕೆ'ಯಾಗಿ ಮಾರ್ಪಟ್ಟಿದೆ. ಬಹುಶಃ ಇದು ಕ್ರಿಕೆಟ್ ಪಂದ್ಯದ ಸೂಕ್ಷ್ಮ ವೀಕ್ಷಣೆಯ ಫಲ. 'ಕೆಲವಂ ಟೀವಿ ವೀಕ್ಷಿಸುತಂ, ಕೆಲವಂ ಟೀವಿ ವೀಕ್ಷಕ ವಿವರಣೆ ಕೇಳುತಂ' ಕಲಿತುದರ ಫಲ. ಕ್ರಿಕೆಟ್ ಪಂದ್ಯದಲ್ಲಿ ಕ್ಷೇತ್ರ ರಕ್ಷಣೆಗೆ ಹೋಗುವ ಮೊದಲು ಕ್ಯಾಪ್ಟನ್ ಸುತ್ತ ಉಳಿದ ಹತ್ತು ಜನರು ವೃತ್ತಾಕಾರವಾಗಿ ಹತ್ತಿರ ಹತ್ತಿರ ಇಡುಕಿಕೊಂಡು ಬಗ್ಗಿ ನಿಂತು ಮಾತನಾಡುವ ರೀತಿಯ ಅನುಕರಣೆ.

ಈ ಆಪ್ತಮಿತ್ರರೆಲ್ಲ ಸೇರಿ ಮಾತನಾಡಲು ಪ್ರಾರಂಭಿಸುವಾಗ ಆ ಗುಂಪು ಯದ್ವಾತದ್ವ ನಿಂತಿರುತ್ತಿತ್ತು. ಒಬ್ಬ ಸೈಕಲ್ ಹಿಡಿದು ನಿಂತಿದ್ದರೆ, ಒಬ್ಬಳು ಅದರ ಕ್ಯಾರಿಯರ್ ಮೇಲೆ ಕುಳಿತಿರುತ್ತಿದ್ದಳು. ಅವಳು ಕಾಂಪೌಂಡಿಗೆ ಒರಗಿ ನಿಂತಿದ್ದರೆ, ಇವಳು ಊಹಾತ್ಮಕ ಬ್ಯಾಟಿಂಗೋ ಬೌಲಿಂಗೋ ಮಾಡುತ್ತಿರುತ್ತಿದ್ದಳು. ಉದ್ದಕೂದಲಿನವಳಿಗೆ ಇನ್ನೊಬ್ಬಳು ಜಡೆ ಹಾಕುವುದನ್ನು ಅಭ್ಯಾಸ ಮಾಡಿಕೊಳ್ಳುತ್ತಿದ್ದಳು; ಇಲ್ಲದಿದ್ದರೆ ಪರಸ್ಪರ ಭುಜದ ಮೇಲೆ ಕೈಹಾಕಿ ಏನೋ ಮಾತನಾಡುತ್ತ ನಿಂತಿರುತ್ತಿದ್ದರು. ಹೀಗೆ ಅವರ ಈ ಎಲ್ಲ ಒಟ್ಟಿಗಿದ್ದೂ ಹೊಂದಾಣಿಕೆಯಿಲ್ಲದ ಮಾತುಕತೆಗಳು ನಿಂತು, ಅವರೆಲ್ಲರೂ ಆದಷ್ಟು ಹತ್ತಿರದಲ್ಲಿ ವೃತ್ತಾಕಾರವಾಗಿ ನಿಂತರು ಎಂದರೆ, ಅಲ್ಲಿ ಆಗ ಒಮ್ಮತದ ಯಾವುದೋ ಘನವಾದ ಚರ್ಚೆ ಪ್ರಾರಂಭವಾಗಿದೆ ಎಂದೇ ಖಾತರಿ. ಸಾಮಾನ್ಯವಾಗಿ ಅದರ ನೇರ ಪರಿಣಾಮವಾಗುವುದು ಅವರವರ ತಾಯಿತಂದೆಯರ ಮೇಲೆ ಎಂಬುದೂ ಖಾತರಿ.

'ತಾಯಿ ತಂದೆ' ಎಂದದ್ದು ಏಕೆಂದರೆ, ಸಾಮಾನ್ಯವಾಗಿ ಆ ಚರ್ಚೆಯ ವಿಚಾರ ಮೊದಲು ತಲುಪುತ್ತಿದ್ದುದು ಅವರವರ ತಾಯಂದಿರಿಗೆ. ಅನೇಕ ವಿಚಾರಗಳಿಗೆ ಅಲ್ಲೇ ಒಪ್ಪಿಗೆ ಸಿಕ್ಕಿಬಿಡುತ್ತಿತ್ತು. ಅದರಿಂದ ಇಬ್ಬರಿಗೂ